# ಮಾತೃದರ್ಶನ

ಆಂಗ್ಲ ಮೂಲ: **ಸ್ವಾಮಿ ಸತ್ಪ್ರಕಾಶಾನಂದ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

೧೯೦೮ರ ಫೆಬ್ರವರಿಯಲ್ಲಿ ನಾನು ಕಲ್ಕತ್ತೆಗೆ ಮೊದಲ ಬಾರಿಗೆ ಹೋಗಿದ್ದಾಗ ಮಾಸ್ಟರ್ ಮಹಾಶಯರ ಭೇಟಿಯಾದ ನಂತರ ಶ್ರೀಮಾತೆಯವರ ದರ್ಶನ ಪಡೆಯಬೇಕೆಂದಿದ್ದೆ. ಆದರೆ ಏನೋ ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ. ಆಗ ಬಹುಶಃ ಶ್ರೀಮಾತೆಯವರು ಕಲ್ಕತ್ತೆಯಲ್ಲಿರಲಿಲ್ಲ ; ಅವರ ಹುಟ್ಟೂರಾದ ಜಯರಾಮಬಾಟಿಯಲ್ಲಿದ್ದಿರಬೇಕು.

ಕಲ್ಕತ್ತೆಗೆ ನಾನು ಎರಡನೇ ಬಾರಿ ಬಂದಾಗ, ಅಂದರೆ ೧೯೧೧ರ ಡಿಸೆಂಬರ್‌ನಲ್ಲಿ ನನಗೆ ಶ್ರೀಮಾತೆಯವರನ್ನು ಭೇಟಿಯಾಗುವ ಸೌಭಾಗ್ಯವೊದಗಿಬಂತು. ನಾನು ವಾಸ ಮಾಡುತ್ತಿದ್ದ ಸ್ಥಳದಿಂದ, ಒಂದು ದಿನ ಬುಧವಾರದಂದು, ಮಧ್ಯಾಹ್ನ ಗಾಡಿ ಮಾಡಿಕೊಂಡು ಬಾಗ್‌ಬಜಾರಿನಲ್ಲಿದ್ದ 'ಉದ್ಬೋಧನ ಕಾರ್ಯಾಲಯ'ಕ್ಕೆ ಹೋದೆ. ಅಲ್ಲಿ ಶ್ರೀಮಾತೆಯವರ ಕೋಣೆ ಮೇಲಿನ ಅಂತಸ್ತಿನಲ್ಲಿತ್ತು. ಮುಂಬಾಗಿಲ ಮೂಲಕ ನಾನು ಒಳಗಿನ ಸಣ್ಣ ಹಜಾರವನ್ನು ಪ್ರವೇಶಿಸಿದೆ. ಅಲ್ಲಿ ನಾನು ಹಿಂದೆ ಢಾಕಾದಲ್ಲಿ ನೋಡಿದ್ದ, ಕಾವಿ ಬಣ್ಣದ ಬಟ್ಟೆ ಧರಿಸಿದ್ದ ಸಾಧುವೊಬ್ಬರನ್ನು ಕಂಡೆ. ನನಗೆ ನೆನಪಿರುವಂತೆ, ಅವರ ಹೆಸರು ಕಪಿಲ ಮಹಾರಾಜ್.* ನಾನು ಶ್ರೀಮಾತೆಯವರ ದರ್ಶನ ಪಡೆಯಲು ಬಂದಿದ್ದೇನೆ ಎಂದು ಅವರಿಗೆ ತಿಳಿಸಿದೆ.

ಹೊರಗಿನ ಭಕ್ತರಿಗೆ ಮಂಗಳವಾರ ಮತ್ತು ಶನಿವಾರ ಮಾತ್ರವೇ ಶ್ರೀಮಾತೆಯವರ ದರ್ಶನ ಪಡೆಯಲು ಅವಕಾಶವಿರುವುದಾಗಿ ಅವರು ನನಗೆ ತಿಳಿಸಿದರು. ''ನಾನು ಕಲ್ಕತ್ತೆಯಲ್ಲಿ ಸ್ವಲ್ಪ ಕಾಲವಷ್ಟೇ ಇರುತ್ತೇನೆ. ಶನಿವಾರದವರೆಗೆ ನನಗೆ ಇರಲಾಗದು'' ಎಂದೆ ನಾನು. ಆಗ ಅವರು ಒಬ್ಬ ತರುಣ ಸಾಧುವನ್ನು ಕುರಿತು, ಒಬ್ಬ ಯುವಕ ಭಕ್ತ ಢಾಕಾದಿಂದ ಬಂದಿರುವುದಾಗಿ ತಿಳಿಸಿದರು. ಆ ತರುಣ ಸಾಧುಗಳಿಗೆ ಶ್ರೀಮಾತೆಯವರ ಕೋಣೆಗೆ ಯಾವಾಗ ಬೇಕಾದರೂ ಹೋಗಬಹುದಾಗಿತ್ತು. ಶ್ರೀಮಾತೆಯವರ ಅನುಮತಿಯ ಪ್ರಕಾರ ನಾನು ಆ ತರುಣ ಸಾಧುಗಳೊಂದಿಗೆ ಮೇಲಂತಸ್ತಿನಲ್ಲಿದ್ದ ಶ್ರೀಮಾತೆಯವರ ಕೋಣೆಗೆ ಹೋದೆ.

ಈಗ ಇರುವಂತೆಯೇ, ಆ ಕೋಣೆಯ ಒಂದು ತುದಿಯಲ್ಲಿ ದೇವಾಲಯವಿತ್ತು. ಅದೇ ಕೋಣೆಯ ಇನ್ನೊಂದು ತುದಿಯಲ್ಲಿ ಶ್ರೀಮಾತೆಯವರ ಮರದ ಮಂಚವಿತ್ತು; ಅದರಲ್ಲಿ ಅವರು ಮಲಗುವ ಹಾಸಿಗೆಯಿತ್ತು. ಅವರು ಆ ಮಂಚದ ಮೇಲೆ ಕಾಲನ್ನು ನೆಲಕ್ಕೆ ಇಳಿಬಿಟ್ಟು ಕುಳಿತುಕೊಳ್ಳುತ್ತಿದ್ದರು. ನಾನು ಆ ಕೋಣೆಯನ್ನು ಪ್ರವೇಶಿಸಿದ ಕೂಡಲೇ ಶ್ರೀಮಾತೆಯವರ ಪಾದಗಳ ಬಳಿ, ನೆಲದ ಮೇಲೆ ಕುಳಿತಿದ್ದ ಕೆಲವು ಮಂದಿ ಭಕ್ತೆಯರು ಎದ್ದು ಹೋಗಿ, ಪಕ್ಕದ ಕೋಣೆಯನ್ನು ಸೇರಿಕೊಂಡರು.

ಶ್ರೀಮಾತೆಯವರು ಎಂದಿನಂತೆ ತಮ್ಮ ತಲೆಯ ಮೇಲೆ ಸೆರಗನ್ನೆಳೆದುಕೊಂಡಿದ್ದರು. ನಾನು ಅವರಿಗೆ ನಮಸ್ಕರಿಸಿ, ಅವರ ಪಾದಧೂಳಿಯನ್ನು ಸ್ವೀಕರಿಸಿದೆ. ನಾನು ಢಾಕಾದಿಂದ ಬಂದಿರುವುದಾಗಿಯೂ, ಅವರ ಆಶೀರ್ವಾದವನ್ನು ಬಯಸಿದ್ದಾಗಿಯೂ ನಾನು ತಿಳಿಸಿದೆ. ಅವರು ತಮ್ಮ ಬಲಗೈಯನ್ನು ಮೇಲಕ್ಕೆತ್ತಿ ಆಶೀರ್ವಾದವನ್ನು ನೀಡಿದರು. ಕೆಲವು ಮಾತುಗಳನ್ನೂ ಅವರು ಆಡಿದರು. ಅಷ್ಟರಲ್ಲಿ ಆ ತರುಣ ಸಾಧುಗಳು ಸನ್ನೆ ಮಾಡುತ್ತ ನನ್ನನ್ನು ಅವರತ್ತ ಕರೆದರು. ನಾನು ಕೋಣೆಯ ಬಾಗಿಲನ್ನು ದಾಟಿ ಆ ಸಾಧುಗಳತ್ತ ಹೋದೆ. ಅವರು ನನಗೆ ಒಂದು ದೊನ್ನೆಯಲ್ಲಿ ಹಣ್ಣುಪ್ರಸಾದ ಹಾಗೂ ಸಂದೇಶ (ಒಂದು ಸಿಹಿ ತಿಂಡಿ) ನೀಡಿದರು. ನಾನು ಪ್ರಸಾದವನ್ನು ತಿಂದು ಕೈತೊಳೆದೆ. ಮತ್ತೆ ನಾನು ಶ್ರೀಮಾತೆಯವರ ಕೋಣೆಯನ್ನು ಪ್ರವೇಶಿಸುವುದರಲ್ಲಿದ್ದೆ. ಆಗ ಆ ಸಾಧುಗಳು, ''ಇಲ್ಲ , ಇವತ್ತು ನಿನ್ನ ದರ್ಶನ ಆಗಿ ಹೋಯಿತು'' ಎಂದರು.

ನಾನು ಹೆಚ್ಚಾಗಿ ಕಲ್ಕತ್ತೆಗೆ ಹಾಗೂ ಬೇಲೂರು ಮಠಕ್ಕೆ ಹೋಗುತ್ತಿದ್ದುದು ಬೇಸಿಗೆಯ ರಜಾದಿನಗಳಲ್ಲಿ. ಆಗ ಸಾಮಾನ್ಯವಾಗಿ ಶ್ರೀಮಾತೆಯವರು ಜಯರಾಮಬಾಟಿಯಲ್ಲಿ ಇರುತ್ತಿದ್ದರು. ಸಾಮಾನ್ಯವಾಗಿ ಅವರು ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಬರುತ್ತಿದ್ದ ಜಗದ್ಧಾತ್ರೀ ಪೂಜೆಯ ನಂತರವೇ ಕಲ್ಕತ್ತೆಗೆ ಮರಳುತ್ತಿದ್ದರು. ಕಾಮಾರಪುಕುರ ಹಾಗೂ ಜಯರಾಮಬಾಟಿ ಈ ಪ್ರದೇಶಗಳು ಮಲೇರಿಯಾ ರೋಗದಿಂದ ಪೀಡಿತವಾಗಿದೆ ಎಂದು ನಾನು ಕೇಳಿದ್ದೆ. ನನ್ನ ಜೀವನವೆಲ್ಲ ನಗರದಲ್ಲೇ ಕಳೆದಿತ್ತು. ಹಾಗಾಗಿ ಅಲ್ಲಿಗೆ ಹೋಗಲು, ಅದರಲ್ಲೂ ಮಳೆಗಾಲದಲ್ಲಿ ಅಲ್ಲಿಗೆ ಹೋಗಲು ಯಾರೂ ಸಮ್ಮತಿಸುತ್ತಿರಲಿಲ್ಲ.

ನನಗೆ ನೆನಪಿರುವಂತೆ ೧೯೧೫ರಲ್ಲಿ ಇರಬೇಕು, ಸ್ವಾಮಿ ಪ್ರೇಮಾನಂದರು ಶ್ರೀಮಾತೆಯವರ ಒಂದು ಚಿತ್ರವನ್ನು ನನ್ನ ಬಳಿ ಇಟ್ಟುಕೊಂಡು ಅದನ್ನು ಪೂಜೆ ಮಾಡುವಂತೆ ಹೇಳಿದರು. 'ಉದ್ಬೋಧನ'ದಲ್ಲಿದ್ದ ರಾಸಬಿಹಾರಿ ಮಹಾರಾಜರಿಗೆ (ಸ್ವಾಮಿ ಅರೂಪಾನಂದರು) ಅವರು ಒಂದು ಪತ್ರ ಬರೆದು, ನನಗೆ ಶ್ರೀಮಾತೆಯವರ ಒಂದು ಭಾವಚಿತ್ರವನ್ನು ನೀಡುವಂತೆಯೂ ತಿಳಿಸಿದರು. ನಾನು ರಾಸಬಿಹಾರಿ ಮಹಾರಾಜರ ಬಳಿಗೆ ಹೋಗಿ ಆ ಪತ್ರವನ್ನು ಕೊಟ್ಟೆ; ಹಾಗೂ ಅವರಿಂದ ಶ್ರೀಮಾತೆಯವರ ಭಾವಚಿತ್ರವನ್ನು ಪಡೆದೆ. ಶ್ರೀಮಾತೆಯವರು ಬದುಕಿದ್ದ ತನಕವೂ ಅವರ ಭಾವಚಿತ್ರಗಳು ಮಾರಾಟಕ್ಕೆ ಸಿಗುತ್ತಿರಲಿಲ್ಲವೆಂದು ಇಲ್ಲಿ ಹೇಳಬಯಸುತ್ತೇನೆ. ನಾನು ಆ ಚಿತ್ರವನ್ನು ಅತ್ಯಂತ ಅಮೂಲ್ಯ ನಿಧಿಯೆಂದೇ ಪರಿಗಣಿಸಿ, ಅದರೊಂದಿಗೆ ಢಾಕಾಗೆ ಹಿಂದಿರುಗಿದೆ.

೧೯೦೫ರ ವರೆಗೆ ನಾನು ವಾಸವಾಗಿದ್ದ ಮೋಹಿನೀಬಾಬುಗಳ ಮನೆಯಲ್ಲಿ , ನನ್ನ ದೇವರ ಕೋಣೆಯಲ್ಲಿ ಶ್ರೀರಾಮಕೃಷ್ಣರ ಚಿತ್ರದ ಬಳಿ ಶ್ರೀಮಾತೆಯವರ ಈ ಚಿತ್ರವನ್ನಿಟ್ಟೆ. ಅಲ್ಲಿಂದಲೇ ನಾನು ರಾಮಕೃಷ್ಣ ಮಠದೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿದ್ದೆ.

* ಅವರ ಸಂನ್ಯಾಸ ಹೆಸರು ಸ್ವಾಮಿ ವಿಶ್ವೇಶ್ವರಾನಂದ ಎಂದು. ಆವರು ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದಿದ್ದರು. ೧೯೧೨ರ ಫೆಬ್ರವರಿಯಿಂದ ೧೯೨೦ರ ಜನವರಿ ವರೆಗೆ ಅವರು 'ಉದ್ಬೋಧನ ಕಾರ್ಯಾಲಯದ ಅಧ್ಯಕ್ಷರಾಗಿದ್ದರು. ೧೯೪೯ರ ಆಗಸ್ಟ್ ತಿಂಗಳಲ್ಲಿ ಅವರು ದೇಹತ್ಯಾಗ ಮಾಡಿದರು.

೧೯೦೮ರ ಫೆಬ್ರವರಿ ೬, ಗುರುವಾರದಂದು ನಾನು ಮೊದಲ ಬಾರಿಗೆ ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು) ಅವರನ್ನು ಭೇಟಿ ಯಾದಾಗಿನಿಂದ ಅವರತ್ತ ಹೆಚ್ಚು ಹೆಚ್ಚು ಆಕರ್ಷಿತನಾದೆ. ಆ ದಿನ ನನಗೆ ಸ್ಪಷ್ಟವಾಗಿ ನೆನಪಿದೆ. ಏಕೆಂದರೆ ಅಂದು ವಿದ್ಯಾಧಿದೇವತೆ ಸರಸ್ವತಿಯ ಪೂಜೆಯ ದಿನವಾಗಿತ್ತು. ಮೊದಲ ಭೇಟಿಯಲ್ಲೇ ಮಹಾರಾಜರು ನನ್ನನ್ನು ಅತ್ಯಂತ ಪ್ರೀತಿಯಿಂದ ಕಂಡರು. ಅವರನ್ನು ಭೇಟಿಯಾದಾಗಲೆಲ್ಲ ನಾನು ಆದಷ್ಟು ಅವರಿಗೆ ಆತ್ಮೀಯನಾಗಿರಲು ಯತ್ನಿಸಿದೆ.

೧೯೧೬ರ ಬೇಸಿಗೆಯಲ್ಲಿ ನಾನು ಬೇಲೂರು ಮಠಕ್ಕೆ ಹೋದೆ. ಅವಕಾಶ ಸಿಕ್ಕಿದಾಗ ನಾನು ಮಹಾರಾಜರನ್ನು ಭೇಟಿಯಾಗಿ, ಮಂತ್ರ ದೀಕ್ಷೆಗಾಗಿ ಪ್ರಾರ್ಥಿಸಿಕೊಂಡೆ. ಅವರು ಹೇಳಿದರು, ''ಇರು, ಇರು. ನಾನು ಪಂಚಾಗ ನೋಡಿ ಒಂದು ಒಳ್ಳೆಯ ದಿನವನ್ನು ಗೊತ್ತು ಮಾಡಿಕೊಳ್ಳಬೇಕು. ದೀಕ್ಷೆ ಕೊಡುವುದೆಂದರೆ ಸುಲಭದ ಕಾರ್ಯವಲ್ಲ.'' ಹೀಗೆಯೇ ಕೆಲವು ದಿನಗಳು ಕಳೆದವು.

ಅಷ್ಟರಲ್ಲಿ ಯುವ ಭಕ್ತರ ಒಂದು ಗುಂಪು ಶ್ರೀಮಾತೆಯವರಿಂದ ದೀಕ್ಷೆ ಪಡೆಯಲು ಜಯರಾಮಬಾಟಿಗೆ ಹೊರಟಿತ್ತು. ಬಹುಪಾಲು ಮಂದಿ ಹೊಸಬರು. ಅವರಲ್ಲಿ ಪ್ರಭು (ಮಹಾರಾಜ್), (ಮುಂದೆ ಸ್ವಾಮಿ ವೀರೇಶ್ವರಾನಂದರು, ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದರು) ಕೂಡ ಇದ್ದರು. ಅವರನ್ನು ನೋಡಿ ನನ್ನ ಮನಸ್ಸು ಬದಲಾಯಿತು. ಅವರೊಂದಿಗೆ ಜಯರಾಮಬಾಟಿಗೆ ಹೋಗಿ ಶ್ರೀಮಾತೆಯವರಿಂದ ದೀಕ್ಷೆ ಪಡೆಯುವುದು ಬಹಳ ದೊಡ್ಡ ಸೌಭಾಗ್ಯವಲ್ಲವೇ ಎಂದು ನಾನು ಭಾವಿಸಿದೆ. ನಾನು ಅವರೆಲ್ಲರೊಂದಿಗೆ ಮಹಾರಾಜ್ ಅವರಿಗೆ ಪ್ರಣಾಮ ಮಾಡಿ, ಅವರಿಂದ ಬೀಳ್ಕೊಂಡೆ. ಪ್ರಯಾಣದ ಒಂದು ಭಾಗ ರೈಲಿನ ಮೂಲಕ. ಇನ್ನೊಂದು ಭಾಗವನ್ನು ನಾವು ಬಯಲಿನ ದಾರಿಯಲ್ಲಿ ನಡೆಯುತ್ತ ಕ್ರಮಿಸಿದೆವು. ನಮ್ಮ ಗುಂಪಿನಲ್ಲಿ ೬-೭ ಜನರಿದ್ದೆವು.

ಸಂಜೆ ನನಗೆ ಭೇದಿಯುಂಟಾಯಿತು. ಭೇದಿಯೊಂದಿಗೆ ರಕ್ತವೂ ಹೋಗತೊಡಗಿದ್ದರಿಂದ, ನಾನು ಅಲ್ಲೇ ಉಳಿಯಬೇಕಾಯಿತು. ನನ್ನ ಜೊತೆಗಿದ್ದವರು ಒಂದು ಎತ್ತಿನ ಗಾಡಿಯನ್ನು ಬಾಡಿಗೆಗೆ ತೆಗೆದುಕೊಳ್ಳಲು ಹೇಳಿದರು. ನಾನು ಎತ್ತಿನ ಗಾಡಿಯನ್ನೇರಿ ಮಲಗಿಕೊಂಡೆ. ರಾತ್ರಿಯೆಲ್ಲ ಗಾಡಿ ಚಲಿಸುತ್ತಿತ್ತು. ನಮ್ಮ ಗುಂಪಿನಲ್ಲಿದ್ದ ಶರದಿಂದು (ಮಹಾರಾಜ್), (ಮುಂದೆ ಸ್ವಾಮಿ ವಿಶ್ವನಾಥಾನಂದ ಎಂಬ ಹೆಸರನ್ನು ಪಡೆದರು) ಅನೇಕ ವರ್ಷಗಳಿಂದ ನನಗೆ ಆತ್ಮೀಯ ಸ್ನೇಹಿತರಾಗಿದ್ದರು; ಅವರು ಗಾಡಿಯ ಹಿಂದಿನಿಂದಲೇ ಬರುತ್ತಿದ್ದರು. ನನಗೆ ಕಾಯಿಲೆ ಉಂಟಾಗಿದ್ದುದರಿಂದ ನಾನು ಗಾಡಿಯನ್ನು ನಡುನಡುವೆ ನಿಲ್ಲಿಸಿ ಮುಂದೆ ಸಾಗಬೇಕಾಯಿತು. ಉಳಿದವರೆಲ್ಲ ನಡೆದೇ ಹೋಗುತ್ತಿದ್ದರು – ಕೆಲವರು ಮುಂದೆ, ಕೆಲವರು ಹಿಂದೆ.

ಮರುದಿನ ಬೆಳಿಗ್ಗೆ ನಾವೆಲ್ಲ ಜಯರಾಮಬಾಟಿಗೆ ಸಮೀಪದಲ್ಲಿದ್ದ ನದಿಯ ಬಳಿಗೆ ಬಂದು ತಲುಪಿದೆವು. ದಾರಿಯಲ್ಲಿ ಶರದಿಂದು (ಮಹಾರಾಜ್) ಮತ್ತೆ ಮತ್ತೆ ನನಗೆ ಹೇಳುತ್ತಿದ್ದ, ಈಗಿನ ನನ್ನ ಅನಾರೋಗ್ಯದ ಪರಿಸ್ಥಿತಿಯಲ್ಲಿ ನಾನು ಶ್ರೀಮಾತೆಯವರ ಬಳಿಗೆ ಹೋಗಬಾರದು ಎಂದು. ನನ್ನ ಅನಾರೋಗ್ಯವನ್ನು ಕಂಡು ಶ್ರೀಮಾತೆಯವರು ಅತ್ಯಂತ ದುಃಖಕ್ಕೀಡಾಗುವರು ಎಂದರು. ನಾನು ಕಲ್ಕತ್ತೆಗೆ ಮರಳುವಂತೆ ಅವರು ಒತ್ತಾಯಿಸಿದರು. ಮತ್ತೊಮ್ಮೆ ನಾನು ಮಹಾರಾಜರನ್ನು ದೀಕ್ಷೆ ನೀಡಲು ಪ್ರಾರ್ಥಿಸಿಕೊಳ್ಳುವಂತೆಯೂ ಅವರು ನನಗೆ ಹೇಳಿದರು. ಹಿಂದಿರುಗಿ ಹೋಗುವುದು ನನಗೆ ಸುತರಾಂ ಇಷ್ಟವಿರಲಿಲ್ಲ. ಆದರೆ ಅದೇ ಸಮಯಕ್ಕೆ, ಶ್ರೀಮಾತೆಯವರಿಗೆ ಒಂದಿಷ್ಟು ತೊಂದರೆಯಾಗುವುದೂ ನನಗಿಷ್ಟವಿರಲಿಲ್ಲ. ಕೊನೆಗೂ ನಾನು ಹಿಂದಿರುಗಿ ಹೋಗಲು ನಿರ್ಧರಿಸಿದೆ. ಗಾಡಿ ಓಡಿಸುವವನಿಗೆ ಹಿಂದಿರುಗಿ ಹೋಗಲು ಹೇಳಿದೆ. ಶರದಿಂದು (ಮಹಾರಾಜ್) ತಾವಾಗಿಯೇ ನನ್ನೊಂದಿಗೆ ಬಂದರು.

ಮರುದಿನ ನಾವು ಕಲ್ಕತ್ತೆಗೆ ಬಂದು ಸೇರಿದೆವು. ಅಷ್ಟರಲ್ಲಿ ನನ್ನ ದೇಹಾರೋಗ್ಯ ಸುಧಾರಿಸಿಕೊಂಡಿತು. ಕಲ್ಕತ್ತೆಯಲ್ಲಿ ನನ್ನ ಸಂಬಂಧಿಕರೊಬ್ಬರಿದ್ದರು, ಅವರ ಬಳಿಗೆ ನಾನು ಹೋದೆ. ಅವರು ನನ್ನನ್ನು ಚೆನ್ನಾಗಿ ನೋಡಿಕೊಂಡರು. ಕೆಲವೇ ದಿನಗಳಲ್ಲಿ ನಾನು ಮೊದಲಿನಂತಾದೆ.

ನಾನು ಬೇಲೂರು ಮಠಕ್ಕೆ ಹೋದೆ. ಅಷ್ಟರಲ್ಲಿ ನಾನು ಕಲ್ಕತ್ತೆಗೆ ಮರಳಿಬಂದ ಕಥೆ ಬೇಲೂರು ಮಠದಲ್ಲಿ ಎಲ್ಲರ ಕಿವಿಗೆ ಬಿದ್ದಿತ್ತು. ಅನೇಕ ಮಂದಿ ಭಕ್ತರಿಗೂ ಅದು ತಿಳಿಯಿತು. ದೇವಾಲಯಕ್ಕೆ ಹೋಗಿ ನಮಸ್ಕಾರ ಮಾಡಿ ಬಂದ ಮೇಲೆ, ನಾನು ಸ್ವಾಮಿ ಪ್ರೇಮಾನಂದರಿಗೆ ಪ್ರಣಾಮ ಮಾಡಿದೆ. 'ಕಾಲ ಕೂಡಿ ಬರದೆ ಏನನ್ನೂ ಸಾಧಿಸಲಾಗದು' ಎಂದು ಅವರು ಹೇಳಿದರು. ಅನಂತರ ನಾನು ಮಹಾರಾಜರ ಭೇಟಿ ಮಾಡಿದೆ. ಅವರ ಭೇಟಿಯಾಗುವಾಗ ನಾನು ತುಂಬಾ ಹೆದರಿಬಿಟ್ಟಿದ್ದೆ. ನನ್ನನ್ನು ಬೈದುಬಿಡುತ್ತಾರೆ ಎಂದೇ ನಾನು ಭಾವಿಸಿದ್ದೆ. ನನ್ನನ್ನು ನೋಡಿದ ಕೂಡಲೇ ಅವರು ಸಂಸ್ಕೃತದಲ್ಲಿ, ''ಶ್ರೇಯಾಂಸಿ ಬಹುವಿಘ್ನಾನಿ'' ಎಂದರು. ನನ್ನನ್ನು ಪ್ರೀತಿಯಿಂದ ಮಾತನಾಡಿಸಿದರು. ಇದರಿಂದ ನನಗೆ ಸಮಾಧಾನವಾಯಿತು.

೧೯೧೭ರಲ್ಲಿ ನಾನು ಕಲ್ಕತ್ತೆಗೆ ಬಂದು ಮಹಾರಾಜರನ್ನು ಭೇಟಿಯಾದೆ. ಒಂದು ತಿಂಗಳ ನಂತರ ಅವರು ನನಗೆ ಮಂತ್ರದೀಕ್ಷೆಯನ್ನು ದಯಪಾಲಿಸಿದರು. ಆಗ ಶ್ರೀಮಾತೆಯವರು ಕಲ್ಕತ್ತೆಯಲ್ಲಿರಲಿಲ್ಲ. ಮುಂದೆ ನನ್ನ ಜೀವನದಲ್ಲಿ ಕೆಲವು ಬದಲಾವಣೆಗಳೂ ಉಂಟಾದವು; ಹೀಗಾಗಿ ಶ್ರೀಮಾತೆಯವರನ್ನು ಎರಡನೇ ಬಾರಿ ಭೇಟಿಯಾಗುವ ಅವಕಾಶ ನನಗೆ ಲಭಿಸಲಿಲ್ಲ. ಅವರು ೧೯೨೦ರ ಜುಲೈ ತಿಂಗಳಲ್ಲಿ ಮಹಾಸಮಾಧಿಯನ್ನು ಹೊಂದಿದರು.

ಅದರೂ ನನಗೆ ೧೯೨೩ರ ಏಪ್ರಿಲ್‌ನಲ್ಲಿ ಶ್ರೀಮಾತೆಯವರ ಜನ್ಮಸ್ಥಳವಾದ ಜಯರಾಮಬಾಟಿಯಲ್ಲಿ ನಡೆದ 'ಮಾತೃಮಂದಿರ'ದ ಪ್ರತಿಷ್ಠಾಪನೆಯಲ್ಲಿ ಭಾಗವಹಿಸುವ ಭಾಗ್ಯ ಲಭಿಸಿತು. ಸ್ವಾಮಿ ಶಾರದಾನಂದರು ಮಂದಿರದ ಪ್ರತಿಷ್ಠಾಪನೆಯನ್ನು ನೆರವೇರಿಸಿದರು. ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳಲ್ಲಿ ನೂರಕ್ಕೂ ಹೆಚ್ಚು ಮಂದಿ ಅಲ್ಲಿ ಸೇರಿದ್ದರು. ಕಲ್ಕತ್ತಾ ಹಾಗೂ ಇನ್ನಿತರ ಪ್ರದೇಶಗಳಿಂದ ಬಂದ ಅನೇಕ ಮಂದಿ ಭಕ್ತರು ಅಲ್ಲಿ ನೆರೆದಿದ್ದರು. ಅನೇಕ ದಿನಗಳ ಕಾಲ ಉತ್ಸವ ಜರುಗಿತು. ಹತ್ತಿರದ, ದೂರದ ಹಳ್ಳಿಗಳಿಂದ ಸಾವಿರಾರು ಜನರು ಬಂದಿದ್ದರು. ಅವರಿಗೆಲ್ಲಾ ಹೊಟ್ಟೆ ತುಂಬಾ ಊಟ ಹಾಕಲಾಗಿತ್ತು. ನಾನು ನನ್ನ ಜೀವನದಲ್ಲಿ ಭಾಗವಹಿಸಿದ ಉತ್ಸವಗಳಲ್ಲೆಲ್ಲ ಇದು ಅತ್ಯಂತ ವಿಶೇಷವಾದ ಕಾರ್ಯಕ್ರಮ ಎನ್ನಬೇಕು.